C.R.P.67

| Form No.4 (Civil) Deposition Sheets (R.P.No.57) |
|---|

**<u>*1* ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.</u>**

<u>ಸ್ಪೆಷಲ್ ಸಿ ಸಂಖ್ಯೆಃ **49/2020**</u>

ಪ್ರಾಸಾ. **16** ಚಾಸಾ. **30**

| | | |
|---|---|---|
| ಸಾಕ್ಷಿದಾರರ ಹೆಸರು | : | ಎನ್. ಜೆ. ಲೋಕ್ಯ ನಾಯಕ್ |
| ತಂದೆಯ ಹೆಸರು | : | ಜೇಮ್ಲಾ ನಾಯಕ್ |
| ವಯಸ್ಸು | : | 59 ವರ್ಷಗಳು |
| ಉದ್ಯೋಗ | : | ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು. |
| ವಾಸ | : | ಯಲಹಂಕ, ಬೆಂಗಳೂರು. |

<u>ಪ್ರಮಾಣ ವಚನ ಬೋಧಿಸಿದ ದಿನಾಂಕಃ **02.04.2026.**</u>
<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>

ನಾನು ಮಾರ್ಚ್ 2017 ರಿಂದ ಸೆಪ್ಟೆಂಬರ್ 2023 ರ ವರೆಗೆ ದೊಡ್ಡಬಳ್ಳಾಪುರ ಲೋಕೋಪಯೋಗಿ ಕಛೇರಿಯಲ್ಲಿ ಅಭಿಯಂತರರಾಗಿ ಕೆಲಸ ನಿರ್ವಹಿಸಿದ್ದೇನು.

2. ಪ್ರಸ್ತುತ ಪ್ರಕರಣ ಕುರಿತಂತೆ ತನಿಖಾಧಿಕಾರಿಯವರು ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಕೃತ್ಯ ಸ್ಥಳದ ನಕಾಶೆಯನ್ನು ತಯಾರು ಮಾಡಿ ನೀಡುವಂತೆ ಮಾಡಿದ್ದ ಲಿಖಿತ ಕೋರಿಕೆ ಮೇರೆಗೆ ನಾನು ಕೃತ್ಯ ಸ್ಥಳಕ್ಕೆ ದಿನಾಂಕ 18.10.2018 ರಂದು ಸಿಬ್ಬಂದಿ ವರ್ಗದವರಾದ ಚಾ.ಸಾ-33 ಮತ್ತು 34 ರವರೊಂದಿಗೆ ಕೃತ್ಯದ ಸ್ಥಳವಾದ ನರಸಿಂಹಸ್ವಾಮಿ ದೇವಾಲಯದ ಸಮೀಪ ಇರುವ ಮತ್ತು ಪ್ರಾಣಿಗಳು ನೀರು ಕುಡಿಯುವ ಸಲುವಾಗಿ ನಿರ್ಮಿಸಲಾಗಿರುವ ಕೆರೆ ಕಟ್ಟೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಆ ಬಗ್ಗೆ ನಕಾಶೆ ತಯಾರಿಸಿರುತ್ತೇನೆ.

3. ತನಿಖಾಧಿಕಾರಿ ನೀಡಿದ್ದ ಲಿಖಿತ ಕೋರಿಕೆಯನ್ನು ಈಗ ನನ್ನಿಂದ ನಿ.ಪಿ-38 ಎಂದು ಗುರುತಿಸಲಾಯಿತು. ಮೇಲೆ ಹೇಳಿದಂತೆ ದೇವಸ್ಥಾನದ ಸಮೀಪದ ಕೆರೆ ಕಟ್ಟೆ ಸ್ಥಳ ಕುರಿತಂತೆ ಬರೆದ ನಕಾಶೆಯನ್ನು ಈಗ ನನ್ನಿಂದ ನಿ.ಪಿ-39 ಎಂದು ಗುರುತಿಸಲಾಯಿತು.

4. ನಾನು ಮತ್ತೊಂದು ಸ್ಥಳವಾದ ಉಜ್ಜಯಿನಿ ಗ್ರಾಮದ ಗೌರಮ್ಮನ ಕೆರೆ ಸ್ಥಳಕ್ಕೆ ಅದೇ ದಿನ ಅದೇ ಪೋಲೀಸ್ ಸಿಬ್ಬಂದಿಯವರೊಂದಿಗೆ ಭೇಟಿ ನೀಡಿ ಸ್ಥಳ ಪರಿಶೀಲಿಸಿ ನಕಾಶೆಯನ್ನು ತಯಾರಿಸಿ ನೀಡಿದ್ದೆನು. ಸದರಿ ಗೌರಮ್ಮನ ಕೆರೆ ಸ್ಥಳ ಕುರಿತಂತೆ ಬರೆದ ನಕಾಶೆ ದಾಖಲೆಯನ್ನು ಈಗ ನನ್ನಿಂದ ನಿ.ಪಿ-40 ಎಂದು ಗುರುತಿಸಲಾಯಿತು. ನಿ.ಪಿ-39 ಮತ್ತು ನಿ.ಪಿ-40ರ ನಕಾಶೆಗಳನ್ನು ನಾನು ದಿನಾಂಕ 31.10.2018 ತಯಾರಿಸಿದ್ದೇನೆ. ಸದರಿ ದಾಖಲೆಗಳಲ್ಲಿ ನನ್ನ ರುಜುಗಳು ಇದ್ದು ಅವುಗಳನ್ನು ನಿ.ಪಿ-39(ಎ) ಹಾಗೂ ನಿ.ಪಿ-40(ಎ) ಎಂದು ಗುರುತಿಸಲಾಯಿತು. ಸದರಿ ನಕಾಶೆ ದಾಖಲೆಗಳನ್ನು ಪತ್ರದೊಂದಿಗೆ ನಾನು ತನಿಖಾಧಿಕಾರಿಗೆ ನೀಡಿದ್ದೆನು. ಸದರಿ ಪತ್ರ ದಾಖಲೆಯನ್ನು ಈಗ ನನ್ನಿಂದ ನಿ.ಪಿ-41 ಎಂದೂ, ಅದರಲ್ಲಿಯ ನನ್ನ ರುಜುವನ್ನು ನಿ.ಪಿ-41(ಎ) ಎಂದು ಗುರುತಿಸಲಾಯಿತು. ಅದರಲ್ಲಿಯ ನನ್ನ ಮೇಲಾಧಿಕಾರಿ ಮಂಜುನಾಥ್, ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಇವರ ರುಜುವನ್ನು ನಿ.ಪಿ-41(ಬಿ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಶ್ರೀಮತಿ ಎಸ್ ಪಿ ವಕೀಲರಿಂದ **1, 4** ರಿಂದ **6, 9** ಮತ್ತು **10**ನೇ ಆರೋಪಿತರ ಪರವಾಗಿಃ</u>

5. ನನ್ನನ್ನು ನನ್ನ ಮೇಲಾಧಿಕಾರಿ ಕೃತ್ಯ ಸ್ಥಳಕ್ಕೆ ಭೇಟಿ ಕೊಟ್ಟು ನಕಾಶೆ ತಯಾರಿಸುವ ಕೆಲಸ ನಿಯೋಜನೆ ಕುರಿತಂತೆ ಯಾವುದೇ ಪತ್ರ ದಾಖಲೆಯನ್ನು ನಾನು ಹಾಜರುಪಡಿಸಿಲ್ಲ. ನನ್ನನ್ನು ನಿಯೋಜಿಸಿದ ನಂತರ ನಾನು ಪ್ರಥಮ ಬಾರಿಗೆ ಠಾಣೆಗೆ ದಿನಾಂಕ 18.10.2018 ರಂದು ಹೋಗಿದ್ದೆನು. ನಾನು ಸ್ಥಳಗಳನ್ನು ಪರೀಕ್ಷಿಸಿದ ನಿಖರ ಸಮಯದ ಬಗ್ಗೆ ಈಗ ಉತ್ತರಿಸಲಾರೆ ಆದರೆ ಅಂದಾಜು 11-00 ರ ಸಮಯದಲ್ಲಿ ಮತ್ತು ಮಧ್ಯಾಹ್ನ 1-00 ರ ಸಮಯದಲ್ಲಿ ಎರಡೂ ಸ್ಥಳಗಳಿಗೆ ಅನುಕ್ರಮವಾಗಿ ಭೇಟಿ ಕೊಟ್ಟಿದ್ದೆನು. ನಾನು ಕಚ್ಚಾ ನಕಾಶೆಯನ್ನು ನಿ.ಪಿ-39 ಹಾಗೂ ನಿ.ಪಿ-40 ಕುರಿತಂತೆ ಬರೆದುಕೊಂಡಿದ್ದೆನು ಆದರೆ ನಾನು ಅದನ್ನು ತನಿಖಾಧಿಕಾರಿಗಳಿಗೆ ನೀಡಿಲ್ಲ.

6. ನಿ.ಪಿ-39 ಮತ್ತು 40ರ ದಾಖಲೆಗಳಲ್ಲಿ ನಾನು ದಿನಾಂಕ 19.10.2018 ರಂದು ಸ್ಥಳಗಳನ್ನು ವೀಕ್ಷಿಸಿದ ಬಗ್ಗೆ ನಮೂದು ಇರುತ್ತದೆ ಎಂದರೆ

ಸರಿ. ನಿ.ಪಿ-39 ಮತ್ತು 40ರ ದಾಖಲೆಗಳಲ್ಲಿ ಅವುಗಳನ್ನು ತಯಾರಿಸಿದ ದಿನಾಂಕ ಕುರಿತಂತೆ ದಿನಾಂಕ 31.10.2018 ಎಂದು ನಮೂದಿಸಲಾಗಿದೆ ಎಂದರೆ ಸರಿ.

7. ನಾನು ಸ್ಥಳಗಳಿಗೆ ಭೇಟಿ ನೀಡಿದಾಗ ಯಾವುದೇ ಗುರುತುಗಳನ್ನು ಗಮನಿಸಿರುವುದಿಲ್ಲ. ನಿ.ಪಿ-39 ಮತ್ತು 40ರ ದಾಖಲೆಗಳನ್ನು ಪೋಲೀಸರು ಕೇಳಿದ ರೀತಿಯಲ್ಲಿ ನಾನು ತಯಾರು ಮಾಡಿ ನೀಡಿದ್ದೇನೆ ಎಂದರೆ ಸರಿ. ನೀವು ಸ್ಥಳಗಳಿಗೆ ಭೇಟಿ ನೀಡದೆ ನಿಮ್ಮ ಹಿರಿಯ ಅಧಿಕಾರಿ ಮತ್ತು ತನಿಖಾಧಿಕಾರಿಯ ಮಾತಿನ ಮುಲಾಜಿಗೆ ಅಸತ್ಯ ಸಾಕ್ಷಿ ನುಡಿದಿರಿ ಎಂದರೆ ಸರಿಯಲ್ಲ. ನೀವು ಸ್ಥಳಗಳಿಗೆ ಭೇಟಿ ನೀಡದೇ ಇರುವುದರಿಂದ ನಿಮ್ಮ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳಲ್ಲಿ ವಿವಿಧ ದಿನಾಂಕಗಳ ನಮೂದು ಇರುತ್ತದೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ ಎಮ್ ಕೆ ವಕೀಲರಿಂದ **3, 7** ಮತ್ತು **8** ನೇ ಆರೋಪಿತರ ಪರವಾಗಿಃ</u>

3, 7 ಹಾಗೂ 8ನೇ ಆರೋಪಿತರ ಪರ ವಕೀಲರು ಉಳಿದ ಆರೋಪಿಗಳ ಪರ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿದ ಮೇರೆಗೆ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಗಿದೆ.

ಮರು ವಿಚಾರಣೆ ಇಲ್ಲ**.**

**(**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು**)**

ಓ. ಹೇ. ಕೇ. ಸ. ಒ.

(ಸಿದ್ದಲಿಂಗ ಪ್ರಭು)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.